ತಾನು ಬರೆದದ್ದೆಲ್ಲ ಸರ್ವಶ್ರೇಷ್ಠ ಎಂದು ತಿಳಿದುಕೊಂಡಿದ್ದ ಪಾವಂದಯ್ಯ ಮೊನ್ನೆಮೊನ್ನೆ ತಾನೇ ಪ್ರಾಥಮಿಕ ಶಾಲೆಯ ಮೇಷ್ಟ್ರ ಹುದ್ದೆಯಿಂದ ನಿವೃತ್ತರಾಗಿದ್ದರು. ನ್ಯಾಯ, ನಿಷ್ಠೆ, ಪ್ರಾಮಾಣಿಕತೆ ಎಂಬೆಲ್ಲ ಪದಗಳನ್ನು ಸವೆದುಹೋಗುವಷ್ಟು ಉಜ್ಜಿಉಜ್ಜಿ ಊರು, ಕಾಡು, ಮೇಡು ಎಂಬ ಭೇದಭಾವವಿಲ್ಲದೆ ಟ್ರಾನ್ಸ್‌ಫರ್ ಎಂಬ ಧಾಟಿಏಟಿಗೆ ಬಲಿಯಾಗಿ ಎಲ್ಲೆಲ್ಲೋ ಅಲೆದಲೆದು ಸುಸ್ತಾಗಿ ಕೊನೆಗೆ ವಾಲೆಂಟರಿಯಾಗಿ ರಿಟೈರ್‌ಮೆಂಟ್ ಪಡೆದ ಮೇಲೆ ತವರೂರಾದ ಮಲೆನಾಡಿಗೆ ಬಂದು ನೇತುಹಾಕಿಕೊಂಡಿದ್ದರು. ಅಪ್ಪ ಹಾಕಿದ್ದ ನೂರಾರು ತೆಂಗಿನಮರಗಳ ಜೊತೆ ಅಡಿಕೆ, ವೀಳ್ಯದೆಲೆ, ಕಾಳುಮೆಣಸು ಮುಂತಾದ ಉಪಬೆಳೆಗಳೊಂದಿಗೆ ಟೊಮೆಟೋ, ಮೂಲಂಗಿ, ಬದನೆಕಾಯಿ ಮುಂತಾದ ತರಕಾರಿಗಳನ್ನು ಬೆಳೆಯುವುದು, ಮಾರುವುದು ಕಾಯಕ ಮಾಡಿಕೊಂಡರು. ಬೇರೆ ಮನೆ ಮಾಡುವುದರಿಂದ ಬಾಡಿಗೆ ವೇಷ್ಟು ಎಂದು ತೋಟದಲ್ಲಿದ್ದ ಮಿಷಿನ್ನಿನ ಮನೆಗೇ ಬಂದು ಸೇರಿಕೊಂಡಿದ್ದರು. ಆವರೆಗೂ ಅಲ್ಲಿ ನೆಲೆಯೂರಿದ್ದ ತೋಟದಾಳು ಮಲ್ಲೇಶಿ ಮತ್ತವನ ಕುಟುಂಬ ವಪ್ಪಾರದಲ್ಲಿ ನೆಲೆಯೂರಬೇಕಾಯಿತು. ಮಲ್ಲೇಶಿಯ ಹೆಂಡತಿ ಹಗಲು ಹೇಗಾದರೂ ಇರುತ್ತಿದ್ದವಳು ರಾತ್ರಿಯಾದ ಕೂಡಲೇ ಯಾವುಯಾವುದೋ ಪ್ರಾಣಿ, ಸರೀಸೃಪ, ದೆವ್ವಗಳೆಲ್ಲ ಮೈಮೇಲೆ ಹರಿದಾಡಿದಂತಾಗಿ ದಿಢೀರನೆ ಎದ್ದುಕೂತು ನಡುಗಲಾರಂಭಿಸುತ್ತಿದ್ದಳು. ಹರಿದಾಡಿದ್ದು ತನ್ನ ಕೈಕಾಲು ಎಂದು ಮಲ್ಲೇಶಿ ಪಿಸುಮಾತಲ್ಲಿ ಹೇಳುವ ಹೊತ್ತಿಗೆ ಪಾವಂದಯ್ಯ ಮತ್ತವನ ಪತ್ನಿ ಎದ್ದು ಹೊರಗೆ ಬಂದು ನಿಂತಿರುತ್ತಿದ್ದರು. ಹೋಗಲಿ ಪಾಪ, ಹೆಂಗಸು, ಕಾಲ ಸರಿಯಿಲ್ಲ, ಒಳಗೆ ಮಲಗಿಕೊಳ್ಳಲಿ ಬಿಡ್ರೀ ಎಂದರೆ ಆಕೆಯನ್ನು ದುರುಗುಟ್ಟಿ ನೋಡಿ ಯಾರಿಗೂ ಗೊತ್ತಾಗದಂತೆ ಪಚಕ್ಕನೆ ಕಾಲು ತುಳಿದುಬಿಡುತ್ತಿದ್ದರು ಪಾವಂದಯ್ಯ...

ನಿವೃತ್ತಿಯಾದ ನಂತರ ಕಾಲ ಅನ್ನುವುದು ವ್ಯಯವಾಗದೇ ರಾಷ್ಟ್ರೀಯ ಹೆದ್ದಾರಿ ಥರಾ ಹೆಬ್ಬಾವಿನಂತೆ ತನ್ನ ಇಷ್ಟುದ್ದದ ಮೈಯ್ಯನ್ನು ಅಗಲಿಸಿಕೊಂಡು ಅಂಗಾತ ಬಿದ್ದಿರುತ್ತಿತ್ತು. ಏನಾದರೂ ಮಾಡಿ ಅದನ್ನು ಸವೆಸಲೇಬೇಕಲ್ಲ ಎಂಬ ಕಷ್ಟದಲ್ಲಿ ಬೆಳಗ್ಗೆಗೆ ಒಂದು ಸಲ, ಸಂಜೆಗೆ ಒಂದು ಸಲ ಕಲ್ಲುಮಟ್ಟಿಗೆ ವಾಕ್ ಹೋಗುವುದು ಬರುವುದು ಮಾಡುತ್ತಿದ್ದರು. ಕೈಯ್ಯಲ್ಲೊಂದು ಅಡಕ್ಲಾಸ್ ಕ್ಯಾಮೆರಾ ಹಿಡಿದು, ಎಲ್ಲಿ ಬಿದ್ದುಹೋಗಿಬಿಡುವುದೋ ಎಂಬ ಜತನದಿಂದ ಅದರ ಬೆಲ್ಟ್‌ಅನ್ನು ಕುತ್ತಿಗೆಗೆ ನೇತುಹಾಕಿಕೊಂಡು, ಅದರ ಮೈಯ್ಯನ್ನು ನಯವಾದ ಟವೆಲ್ಲಿನಿಂದ, ಇದೀಗ ತಾನೇ ಹುಟ್ಟಿದ ಮಗುವಿಗೆ ಸುತ್ತುವಂತೆ ಸುತ್ತಿ, ಕಾಪಿಡುತ್ತಿದ್ದರು. ಅಲ್ಲೆಲ್ಲೋ ಕುಳಿತ ಪಕ್ಷಿಯನ್ನು ಕಂಡು, ಬಟ್ಟೆಯಿಂದ ಕ್ಯಾಮೆರಾ ಕಣ್ಣನ್ನು ಬಿಡಿಸುವ ಹೊತ್ತಿಗೆ ಅದು ಪುರ್ ಎಂದು ಹಾರಿಹೋಗಿಬಿಟ್ಟಿರುತ್ತಿತ್ತು. ಆಗೆಲ್ಲ ಪಟರ್ ಥರ ತನ್ನ ಕಣ್ಣರೆಪ್ಪೆ ಬಡಿದ ತಕ್ಷಣ ಫೋಟೊ ತೆಗೆಯುವಂತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತಲ್ಲ ಎಂದುಕೊಳ್ಳುತ್ತ, ಅದಕ್ಕೆ ಓತಪ್ರೋತ ಬೈದುಕೊಳ್ಳುತ್ತ ನೆಲದಲ್ಲಿ ಜಡವಾಗಿ ಬಿದ್ದಿರುತ್ತಿದ್ದ ಕಪ್ಪೆ, ಹಾವು, ಚೇಳುಗಳನ್ನೇ ಓರೆಕೋರೆಯಾಗಿ ಹತ್ತಾರು ಆ್ಯಂಗಲ್ಲುಗಳಲ್ಲಿ ಕುಂತು, ನಿಂತು, ಬಗ್ಗಿ ಕ್ಲಿಕ್ಕಿಸುವ ವೇಳೆಗೆ, ಅಲ್ಲಿ ಏನೋ ಸರ್ಕಸ್ ನಡೆಯುತ್ತಿದೆಯೆನ್ನುವಂತೆ ಬಿಡುವಾಗಿರುವ ಹತ್ತಾರು ಜನ ಸೇರಿಬಿಟ್ಟಿರುತ್ತಿದ್ದರು. ತಾನು ಮಹಾ ಫೋಟೊಗ್ರಾಫರ್ ಎಂದೂ, ಸಾಗರ್ ಫೋಟೊಗ್ರಫಿ ಸೊಸೈಟಿಯ ಕಾಂಪಿಟೇಷನ್ನಿನಲ್ಲಿ ಅನೇಕ ಸಲ ಬಹುಮಾನ ಬಂದಿದೆಯೆಂದು ಕೇಳದಿದ್ದರೂ ವಿವರಣೆ ನೀಡುತ್ತ, ತನ್ನ ಡಿಜಿಟಲ್ ಕ್ಯಾಮೆರಾದಲ್ಲಿ ಡಿಲೀಟ್ ಮಾಡದೇ ಉಳಿಸಿಕೊಂಡಿರುವ ನೂರಾರು ಸ್ಟಿಲ್‌ಗಳನ್ನು, ಜನರು ಪುರುಸೊತ್ತಿಲ್ಲವೆಂದರೂ ಬಿಡದಂತೆ, ಇದೊಂದು ನೋಡಿ,